ಓ .ಎಸ್ ನಂಃ 60/2015
ಪಿಡಬ್ಲ್ಯೂಃ 1
ದಿನಾಂಕಃ 30.05.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲ ಃ ಪ್ರತಿವಾದಿ ಪರ ಶ್ರೀ ಎನ್ ಎಸ್ ವಕೀಲರಿಂದಃ

ಪಾರ್ವತಮ್ಮ ಬೂಚಪನಹಳ್ಳಿಯಲ್ಲಿ 80 ವರ್ಷಗಳಿಂದ ವಾಸವಾಗಿದ್ದಾರೆ. ಪಾರ್ವತಮ್ಮನ ಮದುವೆಯನ್ನು ರಾಮರೆಡ್ಡಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ರಾಮರೆಡ್ಡಿ ಯಾರು ಎಂದರೆ ಅವರು ನನ್ನ ತಾಯಿಯ ತಮ್ಮ. ರಾಮರೆಡ್ಡಿಯ ಆಸ್ತಿಗಳು ಬೂಚಪನಹಳ್ಳಿಯಲ್ಲಿ ಇದೆ ಎಂದರೆ ಸರಿ. ವೆಂಕಟಮ್ಮ ರಾಮರೆಡ್ಡಿಯ ಮಗಳು. ಪಾರ್ವತಮ್ಮನನ್ನು ರಾಮರೆಡ್ಡಿ ದತ್ತು ಮಗಳಾಗಿ ಸ್ವೀಕಾರ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪಾರ್ವತಮ್ಮ ತಾನು ರಾಮರೆಡ್ಡಿಯ ದತ್ತು ಮಗಳು ಎಂದು ಹೇಳಿ ರಾಮರೆಡ್ಡಿ ಆಸ್ತಿಯಲ್ಲಿ ನನಗೆ ಪಾಲು ಬರಬೇಕು ಎಂದು ವೆಂಕಟಮ್ಮನ ವಿರುದ್ಧ ಒ ಎಸ್ ನಂಬರ್ 452/2014 ನ್ನು ಕೆಜಿಎಫ್ ಕಿರಿಯ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಪಾರ್ವತಮ್ಮನ ಗಂಡ ವೆಂಕಟರೆಡ್ಡಿ ಎಂದರೆ ಸರಿ. ಆ ದಾವೆಯಲ್ಲಿ ವೆಂಕಟರೆಡ್ಡಿಯ ವಿಚಾರಣೆ ಕೂಡ ಆಗಿದೆಎಂದರೆ ಗೊತ್ತಿಲ್ಲ ಎನ್ನುತ್ತಾರೆ. ಪಾರ್ವತಮ್ಮ ಈ ದಿನ ನ್ಯಾಯಾಲಯಕ್ಕೆ ಬಂದಿರುತ್ತಾರೆ ಎಂದರೆ ಸರಿ . ಪಾರ್ವತಮ್ಮ ತನ್ನ ಪರವಾಗಿ ಈ ದಾವೆಯನ್ನು ನಡೆಸಲು ನನಗೆ ಅಧಿಕಾರ ಪತ್ರ ಏನಾದರೂ ನೀಡಿರುತ್ತಾರೆಯೇ ಅಂದರೆ ಇಲ್ಲ ಎನ್ನುತ್ತಾರೆ.

ಪಾರ್ವತಮ್ಮ ರಾಮರೆಡ್ಡಿಯ ದತ್ತು ಮಗಳಾಗಿರುವುದರಿಂದ ಅವರಿಗೆ ಈ ದಾವೆಯನ್ನು ಹೂಡಲು ಯಾವುದೇ ರೀತಿಯ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಪಾರ್ವತಮ್ಮನನ್ನು ದತ್ತು ಸ್ವೀಕಾರ ಮಾಡಿದ ವಿಚಾರವನ್ನು ಪ್ರತಿವಾದಿ 2 ರಿಂದ 4 ತಮ್ಮ ತಕರಾರಿನಲ್ಲಿ ಹೇಳಿರುವುದರಿಂದ ಅವರನ್ನು ವಿಚಾರಣೆ ಮಾಡದೇ ನಾನು ವಿಚಾರಣೆಗೆ ಒಳಪಟ್ಟಿರುತ್ತೇನೆ ಎಂದರೆ ಸರಿಯಲ್ಲ. ಗುರವಾರೆಡ್ಡಿ 1 ನೇ ಪ್ರತಿವಾದಿ ನನ್ನ ಅಣ್ಣ . 1 ನೇ ಪ್ರತಿವಾದಿ ನಮ್ಮ ತಂದೆಯ ಜೀವಿತಾ ಕಾಲದಲ್ಲಿ ದಾವಾ ಸ್ವತ್ತುಗಳಲ್ಲಿ ಭಾಗ ಬರಬೇಕು ಎಂದು ಒ ಎಸ್ 250/2008 ನ್ನು ನಮ್ಮ ವಿರುದ್ಧ ಸಲ್ಲಿಸಿದ್ದನು ಎಂದರೆ ಸರಿ . ಸದರಿ ದಾವೆಯಲ್ಲಿ ನನ್ನ ತಂದೆ ಕೂಡ ಪಕ್ಷಗಾರನಾಗಿ ತಮ್ಮ ತಕರಾರನ್ನು ಸಲ್ಲಿಸಿದ್ದರು ಎಂದರೆ ಸರಿ . ನಮ್ಮ ತಂದೆ ಆ ದಾವೆಯಲ್ಲಿ ದಾವಾ ಐಟಂ ನಂಬರ್ 3 ನನ್ನ ಸ್ವಯಾರ್ಜಿತ ಆಸ್ತಿ ಎಂದು ತಮ್ಮ ಕರಾರಿನಲ್ಲಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ಆ ದಾವೆ ಚಾಲ್ತಿಯಲ್ಲಿರುವಾಗ

ನಾವೆಲ್ಲ ರಾಜಿ ಮಾಡಿಕೊಂಡು ಆ ದಾವೆಯನ್ನು 1 ನೇ ಪ್ರತಿವಾದಿ ವಜಾ ಮಾಡಿಸಿಕೊಂಡಿರುತ್ತಾರೆಎಂದರೆ ನಿಜ. ಸಾಕ್ಷಿ ಮುಂದುವರೆದು ರಾಜಿಯಾದ ನಂತರವೂ ದಾವಾ ಸ್ವತ್ತುಗಳಲ್ಲಿ ಮರಗಳನ್ನು ಕೊಯ್ಯಲು ಶುರು ಮಾಡಿದ್ದರಿಂದ ಮತ್ತೆ ದಾವೆ ಹೂಡಿರುತ್ತೇನೆ ಎನ್ನುತ್ತಾರೆ. ಸದರಿ ದಾವೆಯಲ್ಲಿ ರಾಜಿ ಯಾರ ಸಮಕ್ಷಮ ಆಗಿದೆ ಎಂದರೆ ಪಾರಂಡಹಳ್ಳಿಯ ಟಿ ಕೃಷ್ಣರೆಡ್ಡಿ, ಐಯ್ಯಪ್ಪಲ್ಲಿಯ ವೆಂಕಟೇಶ್ ರೆಡ್ಡಿ ಮತ್ತು ಪಾರಂಡಹಳ್ಳಿಯ ಜಯರಾಮ್ ರೆಡ್ಡಿ ಎನ್ನುತ್ತಾರೆ. ಸದರಿ ರಾಜಿಯಲ್ಲಿ ಏನೆಂದು ತೀರ್ಮಾನವಾಗಿರುತ್ತದೆ ಎಂದರೆ ಸ್ವಲ್ಪ ಸ್ವಲ್ಪ ಜಮೀನುಗಳನು ನೀವು ಇಟ್ಟು ಕೊಳ್ಳಿರಿ ಎಂದು ರಾಜಿಯಾಗಿರುತ್ತದೆ ಎನ್ನುತ್ತಾರೆ. ಸದರಿ ದಾವೆಯಲ್ಲಿ ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿ ಐಟಂ ನಂಬರ್ 3 ನ್ನು ಹೊರತುಪಡಿಸಿ ಬೇರೆ ಆಸ್ತಿಗಳಲ್ಲಿ ಭಾಗ ಮಾಡಿಕೊಳ್ಳಿ ಎಂದು ತೀರ್ಮಾನಿಸಿರುತ್ತೇವೆ ಎಂದರೆ ಸರಿಯಲ್ಲ. ಆ ರೀತಿ ರಾಜಿಯಾದ ನಂತರವೂ ಸಹ ನಮ್ಮ ತಂದೆ ತೀರಿದ ಬಳಿಕ ಎಲ್ಲಾ ಆಸ್ತಿಗಳಲ್ಲಿ ಭಾಗ ಬೇಕು ಎಂದು ಮತ್ತೊಮ್ಮೆ ಈ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ತಂದೆ ಐಟಂ ನಂಬರ್ 3 ನ್ನು ವಿಲ್ ಮೂಲಕ 2 ರಿಂದ 4 ನೇ ಪ್ರತಿವಾದಿಗಳಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ನಮ್ಮ ತಂದೆ ತೀರಿದ ನಂತರ ಅವರು ವಿಲ್ ಮಾಡಿರುತ್ತಾರೆ ಎಂದು ತಿಳಿದುಬಂದಿರುತ್ತದೆ ಎನ್ನುತಾರೆ.

ವಿಲ್ ಮಾಡಿದ ವಿಚಾರ ಗೊತ್ತಿದ್ದೂ ಅದನ್ನು ಮರೆಮಾಚಿ ಬೇಕಂತಲೇ ಈ ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನನ್ನ ತಂದೆಗೆ 9 ಜನ ಮಕ್ಕಳು. ಐಟಂ ನಂಬರ್ 3 ನ್ನು ಹೊರತುಪಡಿಸಿ ಬೇರೆ ಆಸ್ತಿಗಳಲ್ಲಿ ಏನೆಲ್ಲಾ ವರಮಾನ ಇದೆ ಎಂದು ತಿಳಿದಿದೆಯಾ ಅಂದರೆ ನನಗೆ ಗೊತ್ತಿಲ್ಲ, ಆದರೆ ಅಲ್ಲಿ ನೀಲಗಿರಿ ಮರಗಳು ಇರುತ್ತವೆ ಎನ್ನುತ್ತಾರೆ . ನನ್ನ ತಂದೆ ಕುರಿ ವ್ಯಾಪಾರ ಮತ್ತು ಹುಣಸೇ ವ್ಯಾಪಾರದಿಂದ ಬಂದ ಆದಾಯದಿಂದ ಐಟಂ ನಂಬರ್ 3 ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಮೂಲದಿಂದ ಖರೀದಿ ಮಾಡಲಾಗಿದೆ ಎನ್ನುತ್ತಾರೆ . ಒಟ್ಟು ಕುಟುಂಬದ ಆಸ್ತಿಗಳಿಂದ ಆದಾಯ ಇತ್ತು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆಯೇ ಅಂದರೆ ಇಲ್ಲ ಎನ್ನುತ್ತಾರೆ . ನನ್ನ ತಂದೆಗೆ ಸ್ವಂತ ಆದಾಯ ಇದುದರಿಂದ ಅವರು ತಮ್ಮ ಆದಾಯದಿಂದ ದಾವಾ ಐಟಂ ನಂಬರ್ 3 ನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಸ್ವತ್ತನ್ನು ಯಾವಾಗ ಖರೀದಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ

ಎನ್ನುತ್ತಾರೆ . ನಾನು ಯಾವಾಗ ಹುಟ್ಟಿರುತ್ತೇನೆ ಎಂದರೆ 1959 ರಲ್ಲಿ ಎನ್ನುತ್ತಾರೆ . ಸಾಕ್ಷಿ ಮುಂದುವರೆದು ಆಸ್ತಿ ಖರೀದಿ ಮಾಡಿದ ವಿಚಾರ ನನ್ನ ಅಕ್ಕ ಮತ್ತು ಅಣ್ಣನಿಗೆ ಗೊತ್ತು ಎನ್ನುತ್ತಾರೆ . 1959 ರಲ್ಲಿ 1 ನೇ ಪ್ರತಿವಾದಿಗೆ 5 ವರ್ಷ ಎಂದರೆ ಸರಿ . ಆಗ ಪಾರ್ವತಮ್ಮನಿಗೆ ಎಷ್ಟು ವಯಸ್ಸು ಎಂದರೆ 10 ವರ್ಷ , ಲಕ್ಷ್ಮಮ್ಮನಿಗೆ 4 ವರ್ಷ ಎನ್ನುತ್ತಾರೆ . ಆ ಕಾಲದಲ್ಲಿ ನಾನು ಜನಿಸದೇಇದ್ದು ನನ್ನ ಉಳಿದ ಅಣ್ಣ , ಅಕ್ಕನಿಗೆ 10 ವಶಷದ ಒಳಗೆ ವಯಸ್ತು ಇದುದರಿಂದ ಸ್ವತ್ತನ್ನು ಖರೀದಿ ಮಾಡಲು ವರಮಾನ ಹೇಗೆ ಸಂಗ್ರಹವಾಗಿದೆ ಎಂದು ಅವರಿಗೆ ತಿಳಿದಿರುವುದಿಲ್ಲ ಎಂದರೆ ಸರಿಯಲ್ಲ. ಐಟಂ ನಂಬರ್ 3 ರಲ್ಲಿ ಬೋರಿದೆ , ಸದರಿ ಬೋರನ್ನು ಹಾಕಲು ಮತ್ತು ಜಮೀನನ್ನು ಅಬಿವೃದ್ದಿ ಪಡಿಸಲು ಬೇತಮಂಗಲ ಕೆನರಾ ಬ್ಯಾಂಕ್ನಿಂದ ನನ್ನತಂದೆ ಸಾಲವನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಆ ಜಮೀನಿನಲ್ಲಿ ತೆಂಗಿನ ಮರ ಹಾಕಿ ರೇಷ್ಮೆ ಬೆಳೆ ಬೆಳೆಯಲಾಗಿತ್ತು ಎಂದರೆ ಸರಿ . ಇದೆಲ್ಲಾ ಕೆಲಸವನ್ನು ನನ್ನ ತಂದೆ ಒಬ್ಬರೇ ಮಾಡುತ್ತಿದ್ದರು ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 3 ನಮ್ಮ ತಂದಗೆ ಸೇರಿದ ಸ್ವತ್ತು ಅದರಲ್ಲಿ ಬೇರೆ ಯಾವ ಮಕ್ಕಳಿಗೂ ಹಕ್ಕಿಲ್ಲ ಎಂದರೆ ಸರಿಯಲ್ಲ.

ಐಟಂ ನಂಬರ್ 3 ರ ಖಾತೆ ಮತ್ತು ಪಹಣಿ ನನ್ನ ತಂದೆ ಹೆಸರಿನಲ್ಲಿ ಇದೆ ಎಂದರೆ ಎಲ್ಲಾ ಆಸ್ತಿಗಳ ಪಹಣಿ ಮತ್ತ ಖಾತೆ ನನ್ನ ತಂದೆ ಹೆಸರಿನಲ್ಲಿ ಇದೆ ಎನ್ನುತ್ತಾರೆ . ಐಟಂ ನಂಬರ್ 3 ರಲ್ಲಿ ನನ್ನ ತಂದೆ ಒಂದು ಹುಲ್ಲಿನ ಮನೆಯನ್ನು ಸಹ ಕಟಪ್ಟಿರುತ್ತಾರೆ ಎಂದರೆ ನಾವೆಲ್ಲಾ ಸೇರಿ ಕಟ್ಟಿರುತ್ತೇವೆ ಎನ್ನುತ್ತಾರೆ . ಅದನ್ನು ಕಟ್ಟಿ 30 ವರ್ಷ ಆಗಿದೆ ಎನ್ನುತ್ತಾರೆ . ಐಟಂ ನಂಬರ್ 3 ಒಟ್ಟು ಕುಟುಂಬದ ಸ್ವತ್ತು ಅಲ್ಲ , ಅದರಲ್ಲಿ ನಮಗೆ ಯಾರಿಗೂ ಹಕ್ಕಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ತೀರಿಕೊಂಡ ನಂತರ ಅವರು ಬರೆದುಕೊಟ್ಟ ವಿಲ್ ಆಧಾರದ ಮೇರೆಗೆ ಖಾತೆ ಮಾಡಬೇಕು ಎಂದು ಅರ್ಜಿ ಸಹ 2 ರಿಂದ 4 ಪ್ರತಿವಾದಿಗಳು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ಅರ್ಜಿಗೆ ನಾನು ತಕರಾರು ಸಲ್ಲಿಸಿರುತ್ತೇನೆ ಎಂದರೆ ಸರಿ . ತಕರಾರಿನ ಆಧಾರದ ಮೇರೆಗೆ ಅರ್ಜಿ ವಜಾ ಆಗಿರುತ್ತದೆ. ನನ್ನ ತಂದೆ ಜೀವಿತದಲ್ಲಿ ನನಗೂ, ನನ್ನ ತಂದೆಗೂ ಯಾವುದೇ ಬಿನ್ನಾಬಿಪ್ರಾಯ ಇರಲಿಲ್ಲ . ಸಾಕ್ಷಿಗೆ ದಿನಾಂಕ 01.08.2008 ರ ನೊಂದಾಯಿತ ವಿಲ್ ತೋರಿಸಿ ಅದರಲ್ಲಿರುವ ತನ್ನ ತಂದೆಯ ಪೋಟೋವನ್ನು ಗುರುತಿಸಲು ಕೇಳಿದ ಮೇರೆಗೆ ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು

ಅವರ ತಂದೆಯ ಫೋಟೋವನ್ನು ಮಾತ್ರ ನಿಡಿ 1 ಎಂದು ಗುರುತಿಸಲಾಯಿತು. ಗುರುವಾಯರೆಡ್ಡಿಯವರ ಮಗ ಚಂಗಲ್ ರಾಯರೆಡ್ಡಿ ನನಗೆ ಗೊತ್ತಾ ಎಂದರೆ ಇಲ್ಲ ಎನ್ನುತ್ತಾರೆ . ರಾಮಕೃಷ್ಣ ರೆಡ್ಡಿ ಗೊತ್ತಾ ಎಂದರೆ ಅವರುಾ ಸಹ ಗೊತ್ತಿಲ್ಲ ಎನ್ನುತ್ತಾರೆ . ನಮ್ಮ ತಂದೆ ತಮ್ಮ ಸ್ವ ಇಚ್ಚೆಯಿಂದ ತನ್ನ ಮೂರುಾ ಮಕ್ಕಳಾದ 2 ರಿಂದ 4 ನೇ ಪ್ರತಿವಾದಿಗಳಿಗೆ ದಾವಾ ಐಟಂ ನಂಬರ್ 3 ನ್ನು ನೊಂದಾಯಿತ ವಿಲ್ ಮೂಲಕ ನೀಡಿರುವ ವಿಚಾರ ನಮಗೆ ಗೊತ್ತು ಎಂದರೆ ಸರಿಯಲ್ಲ . ಒ ಎಸ್ 252/2008 ದಾವೆಯಲ್ಲಿ ಐಟಂ ನಂಬರ್ 3 ನ್ನು ಹೊರತಪಡಿಸಿ ಬೇರೆಎಲ್ಲಾ ಆಸ್ತಿಗಳಲ್ಲಿ ರಾಜಿ ಮಾಾಡಿಕೊಂಡಿದ್ದರೂ ಸಹ 2 ರಿಂದ 4 ನೇ ಪ್ರತಿವಾದಿಗಳಿಗೆ ತೊಂದರೆ ಕೊಡಲು ಐಟಂ ನಂಬರ್ 3 ನ್ನು ಈ ದಾವೆಯಲ್ಲಿ ಸೇರಿಸಿ ಭಾಗ ಕೇಳಿರುತೇವೆ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಸೇರಿದ ಮನೆಗಳು ಎಷ್ಟಿವೆ ಎಂದರೆ 5 ಮನೆಗಳು ಇವೆ . ಅವುಗಳ ಪೈಕಿ 4 ಮನೆ ಐಟಂ ನಂಬರ್ 10 ರಲ್ಲಿ ಇದೆ . ಒಂದುಮನೆ ಐಟಂ ನಂಬರ್ 3 ರಲ್ಲಿ ಇದೆ ಎನ್ನುತ್ತಾರೆ . ಶಂಕರರೆಡ್ಡಿ ಗೆ ಯಾವುದೇಮನೆ ಇಲ್ಲ ಎಂದರೆ ಐಟಂ ನಂಬರ್ 3 ರಲ್ಲಿ 75*30 ಅಡಿ ಮನೆಯನ್ನು ನೀಡಿರುತ್ತಾರೆ ಅದು ಈಗ ಬಿದ್ದು ಹೋಗಿರುತ್ತದೆ ಎಂದರೆ ಸರಿಯಲ್ಲ. ಬೇರೆ ಜಮೀನುಗಳಲ್ಲಿ ನನ್ನ ತಂದೆಗೆ ಯಾವುದೇ ಉತ್ಪನ್ನ , ವರಮಾನ ಇರಲಿಲ್ಲ ಎಂದರೆ ಸರಿಯಲ್ಲ. ರೇಷ್ಮೆಯಿಂದ ಪ್ರತಿ ತಿಂಗಳಿಗೆ ವರಮಾನ ಇರುವುದಿಲ್ಲ , 3-4 ವರ್ಷಕೊಮ್ಮೆ ಆದಾಯ ಎಂದರೆ ಸರಿ . ಐಟ಼ಂ ನಂಬರ್ 3 ರಲ್ಲಿ ಭಾಗ ಬರಬೇಕು ಎಂದು ನಾವೆಲ್ಲ ಸೇರಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೆವೆ ಎಂದರೆ ಸರಿಯಲ್ಲ. ಐಟಂ ನಂಬರ್ 3 ರಲ್ಲಿ ನಾವೆಲ್ಲ ಸ್ವಾಧೀನದಲ್ಲಿ ಇರುತ್ತೇವೆ ಎನ್ನುತ್ತಾರೆ . ಸದರಿ ಸ್ವತ್ತಿನಲ್ಲಿ ನಮ್ಮ ತಂದೆ ಜೀವಿತಾವಧಿಯಲ್ಲಿ ಅವರು ಸ್ವಾಧೀನದಲ್ಲಿ ಇದ್ದು ಅವರ ನಂತರ 2 ರಿಂದ 4 ಪ್ರತಿವಾದಿಗಳು ಈಗ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ರಹೀಮ್ ಅಲಿ ಎಮ್ ನದಾಫ್ )
ಅಪರ ಹಿರಿಯ ಸಿ.ಜೆ ಮತ್ತು ಜೆಎಂಎಫ್ ಸಿ
ಕೆಜಿಎಫ್